**DE–07/2023/089** (Pages : 2)

## DEPARTMENTAL TESTS – JULY, 2023

**[Translation from English to Kannada and Translation from Kannada to English]**

[Time : 2 Hours

(Maximum : 100 marks)

1. Translate the following into Kannada. (50)

Man through the use of means of transport has facilitated travel. Travel today, to and from places can be done in minute. People here and there travel in trains buses and cars everyday. For many travelling is common in order to reach their offices, factories and work spots. Some people travel places with a curiosity to see the monuments, museums and other worth seeing spots of interest. Few go on tour to picnic spots just to enjoy and spend the weekend is very common. In foreign countries travel to places during weekend is very common. It gives them a relief from routine work' and also they get prepare themselves for next week's work. Travel, as in earlier days, is basically treated as pilgrimage or tirth yatra. Of course the call of religion has moved people to all corners of the world on arduous Pilgrimage for age. In India it is very common as it is a country of many religions, sacred rivers and places historical and mythological interest. The purpose of travel whatever may be, it is a source of pleasure. Tourism today is one of the world's fastest growing industries. Tourism is India's third largest export industry. Taj Mahal, Golden temple, Sanchi Stupa, Sun temple of Modhera, Dilwara temples of Mount Abu, Surya temple of Konark, Elephanta Caves, Gol Gumbaz of Bijapur, Qutab Minar and such symbols of heritage do attract domestic as well as foreign tourists every year.

2. Translate the following into English. (50)

ಆರ್ಕಿಮಿಡೀಸನು ಕ್ರಿ.ಪೂ. 287ರಲ್ಲಿ ಸಿಸಿಲಿಗೆ ಸೇರಿದ ಸಿರಾಕ್ಯೂಸ್ (Syracuse) ನಗರದಲ್ಲಿ ಜನಿಸಿದನು. ಬಾಲ್ಯದಲ್ಲಿಯೇ ಅವನು ಈಜಿಪ್ಟಿಗೆ ಹೋಗಿ ಅಲೆಗ್ಸಾಂಡ್ರಿಯಾ ಪಟ್ಟಣದಲ್ಲಿದ್ದ ಗ್ರೀಕರ ಪ್ರಸಿದ್ಧ ವಿಶ್ವವಿದ್ಯಾನಿಲಯದಲ್ಲಿ ಗಣಿತಶಾಸ್ತ್ರವನ್ನು ಕಲಿತನು. ಅವನಿಗೆ ಮೊದಲಿನಿಂದಲೂ ಸರ್ವಜನೋಪಯುಕ್ತವಾದ ಯಂತ್ರಗಳನ್ನು ನಿರ್ಮಿಸಬೇಕೆಂದು ಆಸೆಯಿದ್ದಿತು. ಪರೋಪಕಾರವೇ ಅವನ ಧ್ಯೇಯ. ಅವನು ಈಜಿಪ್ಟಿನಲ್ಲಿದ್ದಾಗ ಅಲ್ಲಿ ನೆಲದಲ್ಲಿ ನೀರು ನಿಂತು ಚೌಗಾಗಿ ವ್ಯವಸಾಯಕ್ಕೆ ಬಹಳ ತೊಂದರೆಯಾಗಿದ್ದಿತು. ಆರ್ಕಿಮಿಡೀಸನು ತನ್ನ ಚಾತುರ್ಯದಿಂದ ನಿಂತ ನೀರನ್ನು ತೆಗೆದು ಬೇರೆ ಕಡೆಗೆ ಹಾಯಿಸಲು ಅನುಕೂಲವಾದ ನೀರು ತಿರುಪು (Archimedes Screw) ಎಂಬ ಯಂತ್ರವನ್ನು ನಿರ್ಮಿಸಿದನು. ತಿರುಪಿನಂತೆ ಸುರುಳಿಯಾಗಿ (Spiral) ಬಗ್ಗಿಸಿರುವ ಈ ಕೊಳವೆಯ ಒಂದು ಕೊನೆಯನ್ನು ತಿರುಗಿಸಿದರೆ ನೀರು ಮೇಲೆ ಏರಿ ಬಂದು ಮತ್ತೊಂದು ಕಡೆ ಸುರಿಯುವುದು. ಈ ಯಂತ್ರದ ಸಹಾಯದಿಂದ ಹತ್ತು ಹದಿನೈದು ಅಡಿಗಳಷ್ಟು

ಎತ್ತರದವರೆಗೆ ಸುಲಭವಾಗಿ ನೀರನ್ನು ಎತ್ತಬಹುದು. ಅನೇಕ ವಿಧಗಳಲ್ಲಿ ಪರಿಷ್ಕೃತವಾದ ಯಂತ್ರಗಳು ಈಗ ಉಪಯೋಗಿಸಲ್ಪಡುತ್ತಿವೆಯಾದರೂ ಅಲ್ಲಲ್ಲಿ ಈ ಸುಲಭದ ನೀರು ತಿರುವನ್ನೂ ಉಪಯೋಗಿಸುವುದುಂಟು. ವಿದ್ಯಾರ್ಜನೆಯು ಮುಗಿದೊಡನೆ ಸ್ವದೇಶ ಪ್ರೇಮದಿಂದ ಆರ್ಕಿಮಿಡೀಸನು ಸಿರಾಕ್ಯೂಸಿಗೆ ಬಂದು ನಿಂತನು. ಆ ಕಾಲದಲ್ಲಿ ಅಲ್ಲಿ ಹೀರೋ (Hero) ಎಂಬ ರಾಜನು ಆಳುತ್ತಿದ್ದನು. ಆರ್ಕಿಮಿಡೀಸನ ಬುದ್ಧಿ ಪ್ರಭಾವವು ಬೆಳಕಿಗೆ ಬಂದು ಅವನು ರಾಜನ ಅನುಗ್ರಹಕ್ಕೆ ಪಾತ್ರನಾದನು. ಆದರೆ ಅವನು ಅನುಕೂಲ ಸ್ಥಿತಿಗೆ ಬಂದುದರಿಂದ ಆಲಸ್ಯನಾಗದೆ ಜ್ಞಾನಾಭಿವೃದ್ಧಿಯಾಗುವ ಮಾರ್ಗವನ್ನೇ ಅನುಸರಿಸುತ್ತಿದ್ದನು. ಅವನಿಗೆ ಗಣಿತವೆಂದರೆ ಪರಮಾದರ, ಹೊಸ ಹೊಸ ಸಂಶೋಧನೆಗಳಲ್ಲಿ ಮಗ್ನನಾಗಿದ್ದು ಅನ್ನಾಹಾರಗಳ ಮೇಲೆಯೂ ಗಮನವಿರುತ್ತಿರಲಿಲ್ಲ. ಆಗಿನ ಕಾಲದಲ್ಲಿ ಜನರು ಸ್ನಾನ ಮಾಡುವುದಕ್ಕಾಗಿ ಸಾರ್ವಜನಿಕ ಸ್ನಾನಗೃಹಗಳಿಗೆ ಹೋಗಬೇಕಾಗಿದ್ದಿತು. ಎಷ್ಟೋ ವೇಳೆ ಆರ್ಕಿಮಿಡಿಸನು ಮೈಮರೆತು ಗಣಿತ ಪ್ರಶ್ನೆಗಳ ತೊಡಕನ್ನು ಮನಸ್ಸಿನಲ್ಲಿಯೇ ಬಿಡಿಸುತ್ತಿರಲು, ಸೇವಕರು ಅವನನ್ನು ಬಲಾತ್ಕಾರದಿಂದ ಸ್ನಾನ ಮಾಡಿಸಲು ಎಳೆದೊಯ್ಯುತ್ತಿದ್ದರಂತೆ. ಅಭ್ಯಂಜನಕ್ಕಾಗಿ ಮೈಮೇಲೆ ಎಣ್ಣೆಯನ್ನು ಸವರಿಕೊಂಡಿದ್ದವನು ಉಗುರಿನಿಂದ ಮೈಮೇಲೆ ಗೆರೆಗಳನ್ನೆಳೆಯುತ್ತಾ ರೇಖಾಗಣಿತದ ಲೆಕ್ಕಗಳನ್ನು ಮಾಡುತ್ತಿದ್ದನಂತೆ. ಹೊಸ ವಿಷಯಗಳನ್ನು ಕಂಡುಹಿಡಿದುದರಿಂದ ಅವನ ಕೀರ್ತಿಯು ಹೆಚ್ಚಿತು. ಇಷ್ಟರಲ್ಲಿ ಅವನ ಚಾತುರ್ಯವನ್ನು ನೇರವಾಗಿ ತಿಳಿಯುವ ಸಂದರ್ಭವೊಂದು ರಾಜನಿಗೆ ಒದಗಿಬಂತು.

---